**ಮಹೇಂದ್ರ ಜೈನ್**, ಭಾ.ಆ.ಸೇ.,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಇಂಧನ ಇಲಾಖೆ

ಕರ್ನಾಟಕ ಸರ್ಕಾರದ ಸಚಿವಾಲಯ
ಕೊಠಡಿ ಸಂಖ್ಯೆ: 236, 2ನೇ ಮಹಡಿ, ವಿಕಾಸ ಸೌಧ
ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು-560 001.

ಅ.ಸ. ಪತ್ರ ಸಂಖ್ಯೆ: ಎನರ್ಜಿ 19 ಪಿಟಿಸಿ 2020 ದಿನಾಂಕ:18-06-2020

ಮಾನ್ಯರೆ,

ವಿಷಯ: ದಿನಾಂಕ:10-06-2020 ರಂದು ನಡೆದ ಕರ್ನಾಟಕ ವಿಧಾನ ಸಭೆಯ ಅಂದಾಜು ಸಮಿತಿ ಸಭೆಯಲ್ಲಿ ಬಡಾವಣೆಗಳ ವಿದ್ಯುದೀಕರಣ ಸಂಬಂಧ ನೀಡಲಾದ ನಿರ್ದೇಶನಗಳ ಕುರಿತು.

***********

ದಿನಾಂಕ 10-06-2020 ರಂದು ನಡೆದ ಕರ್ನಾಟಕ ವಿಧಾನಸಭೆಯ ಅಂದಾಜು ಸಮಿತಿ ಸಭೆಯಲ್ಲಿ, ರಾಜ್ಯದಲ್ಲಿ ಅಕ್ರಮವಾಗಿ ನಿಯಮ ಉಲ್ಲಂಘಿಸಿ ರಚನೆಯಾಗುತ್ತಿರುವ ಖಾಸಗಿ ಬಡಾವಣೆಗಳಿಂದ ಸರ್ಕಾರದ ಬೊಕ್ಕಸಕ್ಕೆ ಉಂಟಾಗುತ್ತಿರುವ ನಷ್ಟದ ಬಗ್ಗೆ ಚರ್ಚಿಸಿ, ಬಡಾವಣೆಗಳ ವಿದ್ಯುದೀಕರಣಕ್ಕೆ ಸಂಬಂಧಿಸಿದಂತೆ ಸಮಿತಿಯು ಕೆಳಕಂಡ ನಿರ್ದೇಶನಗಳನ್ನು ನೀಡಿರುತ್ತದೆ.

1. ಖಾಸಗಿ ಬಡಾವಣೆಗಳ ವಿದ್ಯುದೀಕರಣ ಕಾಮಗಾರಿಗಳಿಗೆ ಬಳಸುತ್ತಿರುವ ಸಾಮಗ್ರಿಗಳ ಗುಣಮಟ್ಟವು ಉತ್ತಮವಾಗಿಲ್ಲದೇ, ಕಾಮಗಾರಿಗಳು ಕಳಪೆಮಟ್ಟದಲ್ಲಿ ರಚನೆಯಾಗುತ್ತಿರುವುದನ್ನು ಸಮಿತಿಯು ಗಂಭೀರವಾಗಿ ಪರಿಗಣಿಸಿರುತ್ತದೆ. ಈ ವಿಚಾರವಾಗಿ, ವಿದ್ಯುದೀಕರಣ ಮೂಲಸೌಕರ್ಯ ರಚನೆಗೆ ಬಳಸುವ ಎಲ್ಲಾ ಸಾಮಗ್ರಿಗಳು IS Specification ಹಾಗೂ ವಿದ್ಯುತ್ ಸರಬರಾಜು ಕಂಪನಿಗಳ ಮಾನದಂಡಗಳ ಪ್ರಕಾರ ಇರುವ ಬಗ್ಗೆ ಖಾತ್ರಿಪಡಿಸಿಕೊಳ್ಳಬೇಕಾಗಿದೆ. ಕಾಮಗಾರಿಗಳ ಅನುಷ್ಠಾನ ಮತ್ತು ಕಾರ್ಯನಿರ್ವಹಣೆ ಬಗ್ಗೆ ವಿದ್ಯುತ್ ಸರಬರಾಜು ಕಂಪನಿಗಳ ಸ್ಥಳೀಯ ಉಪವಿಭಾಗ/ ವಿಭಾಗಾಧಿಕಾರಿಗಳು ಹಾಗೂ ತಾಂತ್ರಿಕ ಪರಿಶೋಧನೆ ಮತ್ತು ಗುಣಮಟ್ಟ ವಿಭಾಗಾಧಿಕಾರಿಗಳು ದೃಢೀಕರಿಸಿಕೊಳ್ಳಬೇಕಾಗಿದೆ. ಮುಂಬರುವ ದಿನಗಳಲ್ಲಿ, ಖಾಸಗಿ ಬಡಾವಣೆಗಳ ವಿದ್ಯುತ್ ಕಾಮಗಾರಿಗಳ ಕಳಪೆ ಗುಣಮಟ್ಟ ಹಾಗೂ ನಿರ್ವಹಣೆ ಬಗ್ಗೆ ದೂರುಗಳು ಸ್ವೀಕೃತವಾದಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು. ಈ ಹಿಂದೆ ಗುಣಮಟ್ಟ ಹಾಗೂ ಕಾಮಗಾರಿಗಳು ಖಚಿತಪಡಿಸದೆ ಬಡಾವಣೆಗಳಿಗೆ ಅನುಮೋದನೆ ನೀಡಿರುವ ಪ್ರಕರಣಗಳ ಬಗ್ಗೆಯೂ ಪರಿಶೀಲನೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸತಕ್ಕದ್ದು.

2. ವಿದ್ಯುತ್ ಮೂಲಸೌಕರ್ಯ ರಚನಾ ಕಾಮಗಾರಿಗಳು ಪೂರ್ಣಗೊಂಡ ನಂತರ ಮಳೆ ಮತ್ತು ಬಿರುಗಾಳಿಯಿಂದಾಗಿ, ವಿದ್ಯುತ್ ಕಂಬಗಳು ಒರೆಯಾಗಿ ವಿದ್ಯುತ್ ಮಾರ್ಗಗಳು ಕೆಳಹಂತದಲ್ಲಿ ಜೋತುಬಿದ್ದು ಸುರಕ್ಷತೆಗೆ ಧಕ್ಕೆಯುಂಟಾಗುವುದನ್ನು ತಡೆಗಟ್ಟಲು, RCC/PSC ಕಂಬಗಳನ್ನು ಅಳವಡಿಸುವಾಗ ಅವಶ್ಯವಿರುವೆಡೆ ಕಾಂಕ್ರೀಟ್ ಅಡಿಪಾಯ ಒದಗಿಸಿ ಸುಭದ್ರವಾಗಿ ಮಾರ್ಗ ರಚನೆ ಮಾಡುವುದು ಅತಿ ಅವಶ್ಯವಾಗಿದೆ.

3. ನಿವೇಶನಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಕೆ.ಇ.ಆರ್.ಸಿ ರವರ Conditions of Supply ನ ನಿಯಮಾವಳಿಗಳನ್ವಯ ಮಾಲೀಕತ್ವ ಹಾಗೂ ಇತರ ಕೆಲವು ದಾಖಲೆಗಳನ್ನು ಪಡೆದು ವಿದ್ಯುತ್ ಸಂಪರ್ಕ ನೀಡಬೇಕಾಗಿದೆ. ನಿವೇಶನಗಳಿಗೆ ದಾಖಲೆ ಪಡೆಯದೇ ವಿದ್ಯುತ್ ಸಂಪರ್ಕ ನೀಡಿರುವುದು ಕಂಡುಬಂದಲ್ಲಿ ವಿಷಯವನ್ನು ಗಂಭೀರವಾಗಿ ಪರಿಗಣಿಸಲಾಗುವುದು.

...2

ಕಛೇರಿ : +91-80-2225 2373 / 2203 4648 ಫ್ಯಾಕ್ಸ್ : +91-80-2235 3952 ಇ-ಮೇಲ್ : prs.energy@gmail.com

4. ವಿತರಣಾ ವ್ಯವಸ್ಥೆಯಲ್ಲಿ ಶಿಥಿಲಗೊಂಡು ಅಪಾಯ ಸ್ಥಿತಿಯಲ್ಲಿರುವ ವಿದ್ಯುತ್ ಕಂಬಗಳನ್ನು ಮತ್ತು ತಂತಿಗಳನ್ನು ಶೀಘ್ರವೇ ಬದಲಾಯಿಸಲು ಕ್ರಮ ಕೈಗೊಳ್ಳುವುದು.

ಮೇಲಿನ ಎಲ್ಲಾ ಅಂಶಗಳ ಬಗ್ಗೆ ಸೂಕ್ತ ಕ್ರಮ ವಹಿಸುವಂತೆ ಸೂಚಿಸಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಶ್ರೀ ಹೆಚ್.ಎನ್.ಗೋಪಾಲಕೃಷ್ಣ, ಭಾಆಸೇ
ವ್ಯವಸ್ಥಾಪಕ ನಿರ್ದೇಶಕರು,
ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ,
ಮೈಸೂರು.

ಕ್ರಮಾಂಕ: ಪ್ರವ್ಯ(ತಾ)/ಉ.ಪ್ರವ್ಯ(ತಾ)/ಸ.ಪ್ರವ್ಯ(ತಾ)–2/2020–21/ CYS-457 ದಿನಾಂಕ: 09 JUL 2020
ಲಗತ್ತು:

**ಮೆಮೋ**

ಉಲ್ಲೇಖ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ, ಬೆಂಗಳೂರು ರವರ ಅರೆ ಸರ್ಕಾರಿ ಪತ್ರ ಸಂಖ್ಯೆ: ಎನರ್ಜಿ 19 ಪಿಟಿಸಿ 2020 ದಿನಾಂಕ: 18.06.2020.

ಇವರಿಗೆ,

ಮುಖ್ಯ ಇಂಜಿನಿಯರ್(ವಿ), ಕಾ ಮತ್ತ ಪಾ ವಲಯ, ಚಾವಿಸನಿನಿ, ಮೈಸೂರು ಮತ್ತು ಹಾಸನ ರವರ ಮಾಹಿತಿಗಾಗಿ ಮತ್ತು ಉಲ್ಲೇಖ ಪತ್ರದಲ್ಲಿ ನೀಡಿರುವ ಅಂಶಗಳ ಬಗ್ಗೆ ಸೂಕ್ತ ಕ್ರಮ ವಹಿಸುವಂತೆ ಸೂಚಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ಪ್ರತಿಗಳು ಮಾಹಿತಿಗಾಗಿ :

1. ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಚಾವಿಸನಿನಿ,ಮೈಸೂರು/ಹಾಸನ/ಚಾಮರಾಜನಗರ–ಕೊಡಗು/ಮಂಡ್ಯ.
2. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ, ಚಾವಿಸನಿನಿ.
3. ಉಪ ಪ್ರಧಾನ ವ್ಯವಸ್ಥಾಪಕರು (ಟಿ.ಎ.ಕ್ಯೂ.ಸಿ 1 & 2), ನಿಗಮ ಕಾರ್ಯಾಲಯ, ಚಾವಿಸನಿನಿ, ಮೈಸೂರು ರವರಿಗೆ ಅನುಪಾಲನೆಗಾಗಿ.
4. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ಉಪವಿಭಾಗಗಳು, ಚಾವಿಸನಿನಿ.
5. ಆ.ಸ ವ್ಯವಸ್ಥಾಪಕ ನಿರ್ದೇಶಕರು, ತಾಂತ್ರಿಕ ಸಹಾಯಕರು ನಿರ್ದೇಶಕರು (ತಾಂತ್ರಿಕ) ರವರ ಗಮನಕ್ಕೆ ತರಲು.

ಮು.ಕ/ಕಪ್ರ

9/7/20
ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಚಾ.ವಿ.ಸ.ನಿ.ನಿ, ಮೈಸೂರು.